# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1224
ಮಾನ್ಯ ಸದಸ್ಯರ ಹೆಸರು : ಶ್ರೀ ಪಿ.ಆರ್ ರಮೇಶ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 07.03.2022
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>FSSAI-2006 ಕಾಯ್ದೆ ಅಡಿಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ (ಬಿಬಿಎಂಪಿ ಒಳಗೊಂಡತೆ) ಎಷ್ಟು ಸುರಕ್ಷಾಧಿಕಾರಿಗಳನ್ನು ನೇಮಿಸಲಾಗಿದೆ;</td><td>FSSAI – 2006 ಕಾಯ್ದೆ ಅಡಿಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ (ಬಿಬಿಎಂಪಿ ಒಳಗೊಂಡಂತೆ) ಆಹಾರ ಸುರಕ್ಷತೆ ಅಧಿಕಾರಿಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಂಡಿರುವುದಿಲ್ಲ. ಬೆಂಗಳೂರು ನಗರ ಜಿಲ್ಲೆಯ (ಬಿಬಿಎಂಪಿ ಒಳಗೊಂಡಂತೆ) ವ್ಯಾಪ್ತಿಗೆ ಬರುವ ಆಹಾರ ಸುರಕ್ಷತೆ ಹುದ್ದೆಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಿಯೋಜನೆ ಮತ್ತು ಹೆಚ್ಚುವರಿ ಪ್ರಭಾರದ ಮೂಲಕ FSSAI–2006 ಕಾಯ್ದೆ ಅನ್ವಯ ಒಟ್ಟು 16 ಅರ್ಹವಿರುವ ಸಿಬ್ಬಂದಿ/ಅಧಿಕಾರಿಗಳ ಸೇವೆಯನ್ನು ಪಡೆಯಲಾಗಿರುತ್ತದೆ.</td></tr>
<tr><td>ಆ</td><td>ಕಳೆದ 5 ವರ್ಷಗಳಲ್ಲಿ ಆಹಾರ ಸುರಕ್ಷಾಧಿಕಾರಿಗಳಿಂದ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಎಷ್ಟು ಕಳಪೆ ಗುಣಮಟ್ಟದ ಪದಾರ್ಥಗಳನ್ನು ಪತ್ತೆ ಹಚ್ಚಲಾಗಿದೆ; (ವಿವರ ನೀಡುವುದು)</td><td>ಕಳೆದ 5 ವರ್ಷಗಳಲ್ಲಿ ಆಹಾರ ಸುರಕ್ಷತಾಧಿಕಾರಿಗಳಿಂದ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ (ಬಿಬಿಎಂಪಿ ಒಳಗೊಂಡಂತೆ) ಕಳಪೆ ಗುಣಮಟ್ಟದ ಪದಾರ್ಥಗಳನ್ನು ಪತ್ತೆ ಹಚ್ಚಲಾದ ವಿವರ ಈ ಕೆಳಕಂಡಂತಿವೆ:
<table>
<tr><th>ಜಿಲ್ಲೆ</th><th>ಸಂಗ್ರಹಿಸಿದ ಆಹಾರ ಮಾದರಿಗಳ ಸಂಖ್ಯೆ</th><th>ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳ ಸಂಖ್ಯೆ</th><th>ನ್ಯಾಯಾಲಯದಲ್ಲಿ ದಾಖಲಿಸಿದ ಪ್ರಕರಣಗಳ ಸಂಖ್ಯೆ</th><th>ವಿಧಿಸಲಾದ ದಂಡದ ಮೊತ್ತ ರೂ.ಗಳಲ್ಲಿ</th></tr>
<tr><td>ಬೆಂಗಳೂರು ನಗರ</td><td>2884</td><td>57</td><td>54</td><td>9,20,000/-</td></tr>
</table></td></tr>
<tr><td>ಇ</td><td>ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಾದರಿಯ ಉಪಹಾರ ಕೇಂದ್ರಗಳಲ್ಲಿ ತಯಾರಿಸಿದ ತಿಂಡಿ–ತಿನಿಸುಗಳ ಗುಣಮಟ್ಟ, ಕೇಂದ್ರಗಳ ಶುಭ್ರತೆ ಮೇಲೆ ಆಹಾರ ಸುರಕ್ಷತಾ ಆಯುಕ್ತರು ನಿಗಾ ವಹಿಸುವರೇ; (ಕಳೆದ 5 ವರ್ಷಗಳಿಂದ ಕೈಗೊಂಡ ಕ್ರಮಗಳ ವಿವರ ನೀಡುವುದು)</td><td>ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ (ಬಿಬಿಎಂಪಿ ಒಳಗೊಂಡಂತೆ) ಬರುವ ಎಲ್ಲಾ ಮಾದರಿಯ ಉಪಹಾರ ಕೇಂದ್ರಗಳಲ್ಲಿ ತಯಾರಿಸಿದ ತಿಂಡಿ–ತಿನಿಸುಗಳ ಗುಣಮಟ್ಟ, ಕೇಂದ್ರಗಳ ಶುಭ್ರತೆ ಮೇಲೆ ಆಹಾರ ಸುರಕ್ಷತಾಧಿಕಾರಿಗಳು ನಿಗಾ ವಹಿಸಿ ಕೈಗೊಂಡ ಕ್ರಮದ ಕಳೆದ 5 ವರ್ಷಗಳ ವಿವರ ಈ ಕೆಳಕಂಡಂತಿದೆ:
<table>
<tr><th>ಜಿಲ್ಲೆ</th><th>ತಿಂಡಿ–ತಿನಿಸುಗಳ ಗುಣಮಟ್ಟ, ಕೇಂದ್ರಗಳ ಶುಭ್ರತೆಯ ತಪಾಸಣೆಗಳ ಸಂಖ್ಯೆ</th><th>ನೋಟಿಸ್‌ಗಳ ಸಂಖ್ಯೆ</th><th>ವಿಧಿಸಲಾದ ದಂಡದ ಮೊತ್ತ ರೂ.ಗಳಲ್ಲಿ</th><th>ನ್ಯಾಯಾಲಯ ಪ್ರಕರಣಗಳ ಸಂಖ್ಯೆ</th></tr>
<tr><td>ಬೆಂಗಳೂರು ನಗರ</td><td>11831</td><td>3158</td><td>60,000/-</td><td>0</td></tr>
</table></td></tr>
</table>

<table>
<tr>
<td>ಈ</td>
<td>ಕಳಪೆ ಮತ್ತು ಕಲಬೆರಕೆ ಆಹಾರದ ಬಗ್ಗೆ ಬೆಂಗಳೂರು ನಗರ ಜಿಲ್ಲೆಯಲ್ಲಿ ದೂರುಗಳು ಬಂದಿವೆಯೇ; ಬಂದಿದ್ದಲ್ಲಿ, ಮಾಹಿತಿ ನೀಡುವುದು;</td>
<td>ಬಂದಿದೆ<br><br>ಕಳಪೆ ಮತ್ತು ಕಲಬೆರಕೆ ಆಹಾರದ ಬಗ್ಗೆ ಬೆಂಗಳೂರು ನಗರ ಜಿಲ್ಲೆಯಲ್ಲಿ (ಬಿಬಿಎಂಪಿ ಒಳಗೊಂಡಂತೆ) 306 ದೂರುಗಳು ಬಂದಿದೆ. ದೂರುಗಳನ್ನು ಪರಿಶೀಲಿಸಿ ಒಟ್ಟು 248 ನೋಟಿಸ್ ಜಾರಿ ಮಾಡಲಾಗಿದ್ದು, ರೂ.10,000/-ದಂಡ ವಿಧಿಸಲಾಗಿದೆ.</td>
</tr>
<tr>
<td>ಉ</td>
<td>ಬೆಂಗಳೂರು ನಗರ ಜಿಲ್ಲೆಯಲ್ಲಿ FSSAI ಆಯುಕ್ತರ ಕಛೇರಿಯಲ್ಲಿ ಮತ್ತು ರಾಜ್ಯಾದ್ಯಂತ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ ಎಷ್ಟು; (ಸದರಿ ಅಧಿಕಾರಿಗಳ ಏಣಿ/ಶ್ರೇಣಿ (Hierarchy) ವಿವರಗಳನ್ನು ನೀಡುವುದು)</td>
<td>ಬೆಂಗಳೂರು ನಗರ ಜಿಲ್ಲೆಯಲ್ಲಿ (ಬಿಬಿಎಂಪಿ ಒಳಗೊಂಡಂತೆ) FSSAI ಆಯುಕ್ತರ ಕಛೇರಿಯಲ್ಲಿ ಮತ್ತು ರಾಜ್ಯಾದ್ಯಂತ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು 155 ಅಧಿಕಾರಿಗಳು ನಿಯೋಜನೆ ಹಾಗೂ ಹೆಚ್ಚುವರಿ ಪ್ರಭಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅದರಂತೆ, ಕರ್ತವ್ಯ ನಿರ್ವಹಿಸುತ್ತಿರುವ ಸದರಿ ಅಧಿಕಾರಿಗಳ ಏಣಿ/ಶ್ರೇಣಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td>
</tr>
<tr>
<td>ಊ</td>
<td>ಸದರಿ ಜಿಲ್ಲೆಯಲ್ಲಿ ಆಹಾರ ವಿಶ್ಲೇಷಣೆ ಮಾಡುವ ಸರ್ಕಾರಿ/ಖಾಸಗಿ ಪ್ರಯೋಗಾಲಯಗಳ ಸಂಖ್ಯೆ ಎಷ್ಟು; ರಾಷ್ಟ್ರೀಯ/ಅಂತರಾಷ್ಟ್ರೀಯ ಮಟ್ಟದ ಬ್ರಾಂಡೆಡ್ ಕಂಪನಿಗಳು ಉತ್ಪಾದನೆ ಮಾಡಿರುವ ಆಹಾರ ಪದಾರ್ಥಗಳನ್ನು ಪರೀಕ್ಷಿಸಿ ಕಳಪೆಯಿದ್ದಲ್ಲಿ, ಅಂತಹ ಸಂಸ್ಥೆಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು: (ಕಳೆದ 5 ವರ್ಷಗಳ ಮಾಹಿತಿ ನೀಡುವುದು)</td>
<td>ಬೆಂಗಳೂರು ನಗರ ಜಿಲ್ಲೆಯಲ್ಲಿ (ಬಿಬಿಎಂಪಿ ಒಳಗೊಂಡಂತೆ) ಆಹಾರ ವಿಶ್ಲೇಷಣೆ ಮಾಡುವ ಸರ್ಕಾರಿ ಪ್ರಯೋಗಾಲಯಗಳ ಸಂಖ್ಯೆ:01, ಖಾಸಗಿ ಪ್ರಯೋಗಾಲಯಗಳ ಸಂಖ್ಯೆ:10<br><br>ರಾಷ್ಟ್ರೀಯ/ಅಂತರಾಷ್ಟ್ರೀಯ ಮಟ್ಟದ ಬ್ರಾಂಡೆಡ್ ಕಂಪನಿಗಳು ಉತ್ಪಾದನೆ ಮಾಡಿರುವ ಆಹಾರ ಪದಾರ್ಥಗಳನ್ನು ಪರೀಕ್ಷಿಸಿ ಕಳಪೆಯಿದ್ದಲ್ಲಿ, ಅಂತಹ ಸಂಸ್ಥೆಗಳ ವಿರುದ್ಧ ಕೈಗೊಂಡಿರುವ ಕ್ರಮಗಳ ವಿವರ ಈ ಕೆಳಕಂಡಂತಿದೆ:<br><br>(ಕಳೆದ 05 ವರ್ಷಗಳ ಮಾಹಿತಿ)<br>
<table>
<tr><th>ಜಿಲ್ಲೆ</th><th>ಸಂಗ್ರಹಿಸಿದ ಆಹಾರ ಮಾದರಿಗಳ ಸಂಖ್ಯೆ</th><th>ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳ ಸಂಖ್ಯೆ</th><th>ಕ್ರಮ (ನ್ಯಾಯಾಲಯದಲ್ಲಿ ದಾಖಲಿಸಿದ ಪ್ರಕರಣಗಳ ಸಂಖ್ಯೆ)</th><th>ವಿಧಿಸಲಾದ ದಂಡದ ಮೊತ್ತ ರೂ.ಗಳಲ್ಲಿ</th></tr>
<tr><td>ಬೆಂಗಳೂರು ನಗರ</td><td>1962</td><td>21</td><td>21</td><td>45000/-</td></tr>
</table>
</td>
</tr>
<tr>
<td>ಋ</td>
<td>ಬೆಂಗಳೂರು ನಗರ ಜಿಲ್ಲೆಯ ರಸ್ತೆ ಬದಿಯಲ್ಲಿ ಮಾರಾಟವಾಗುವ ಆಹಾರ ಪದಾರ್ಥಗಳ ಗುಣಮಟ್ಟದ ಪರೀಕ್ಷೆ ಮಾಡಲಾಗಿದೆಯೇ; (ಕಳೆದ 5 ವರ್ಷಗಳ ವಿವರಗಳನ್ನು ನೀಡುವುದು)</td>
<td>ಹೌದು.<br><br>ಕಳೆದ 05 ವರ್ಷಗಳ ಮಾಹಿತಿ ವಿವರ ಈ ಕೆಳಕಂಡಂತಿದೆ:<br>
<table>
<tr><th>ಜಿಲ್ಲೆ</th><th>ತಪಾಸಣೆ</th><th>ಸಂಗ್ರಹಿಸಿದ ಆಹಾರ ಮಾದರಿಗಳ ಸಂಖ್ಯೆ</th><th>ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳ ಸಂಖ್ಯೆ</th><th>ನ್ಯಾಯಾಲಯದಲ್ಲಿ ದಾಖಲಿಸಿದ ಪ್ರಕರಣಗಳ ಸಂಖ್ಯೆ</th><th>ವಿಧಿಸಲಾದ ದಂಡದ ಮೊತ್ತ</th></tr>
<tr><td>ಬೆಂಗಳೂರು ನಗರ</td><td>5033</td><td>0</td><td>0</td><td>0</td><td>0</td></tr>
</table>
</td>
</tr>
<tr>
<td>ಎ</td>
<td>ಕಳೆದ 5 ವರ್ಷದಲ್ಲಿ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಿಂದ ಬೆಂಗಳೂರು ನಗರ ಜಿಲ್ಲೆಗೆ ಬರುವ ಎಲ್ಲಾ ರೀತಿಯ ಆಹಾರ ಪದಾರ್ಥಗಳ (ದ್ರವ/ಘನ ರೂಪ)</td>
<td>ಹೌದು.<br><br>ಕಳೆದ 05 ವರ್ಷಗಳ ಮಾಹಿತಿ ವಿವರ ಈ ಕೆಳಕಂಡಂತಿದೆ:</td>
</tr>
</table>

| | | |
|---|---|---|
| | ಗುಣಮಟ್ಟದ ಮೇಲೆ ವಿಸ್ತೃತವಾದ ವರದಿ ನೀಡಲಾಗಿದೆಯೇ; ನೀಡಿದ್ದಲ್ಲಿ ಕೈಗೊಂಡ ಕ್ರಮದ ವಿವರ ನೀಡುವುದು; | (see table below) |

| ಜಿಲ್ಲೆ | ಆಹಾರ ಪದಾರ್ಥಗಳ (ದ್ರವ/ಘನ ರೂಪ) ಗುಣಮಟ್ಟದ ಸಂಗ್ರಹಿಸಿದ ಆಹಾರ ಮಾದರಿಗಳ ಸಂಖ್ಯೆ | ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳ ಸಂಖ್ಯೆ | ನ್ಯಾಯಾಲಯದಲ್ಲಿ ದಾಖಲಿಸಿದ ಪ್ರಕರಣಗಳ ಸಂಖ್ಯೆ | ವಿಧಿಸಲಾದ ದಂಡದ ಮೊತ್ತ ರೂ.ಗಳಲ್ಲಿ |
|---|---|---|---|---|
| ಬೆಂಗಳೂರು ನಗರ | 2884 | '57 | 54 | 9,20,000/- |

| | | |
|---|---|---|
| ಐ | Metro, D mart, Reliance Retail, Big Bazaar, ಇತ್ಯಾದಿ ಸಂಸ್ಥೆಗಳಲ್ಲಿ ಮಾರಾಟವಾಗುವ ಧಾನ್ಯಗಳು, ಆಡುಗೆ ಎಣ್ಣೆ ಮತ್ತು ಇತರೆ ಸಂಸ್ಕರಿಸಿದ ಪದಾರ್ಥಗಳ ಗುಣಮಟ್ಟ/ಸೇವಿಸಲು ಯೋಗ್ಯತೆಯ ಕುರಿತು ಅಹಾರ ಸುರಕ್ಷತಾಧಿಕಾರಿಗಳು ನಿಗಾ ವಹಿಸಿರುವರೇ? (ವಿವರಗಳನ್ನು ನೀಡುವುದು) | ಬೆಂಗಳೂರು ನಗರ ಜಿಲ್ಲೆ (ಬಿಬಿಎಂಪಿ ಒಳಗೊಂಡಂತೆ) Metro, D-mart, Reliance Retail, Big Bazaar, ಇತ್ಯಾದಿ ಸಂಸ್ಥೆಗಳಲ್ಲಿ ಮಾರಾಟವಾಗುವ ಧಾನ್ಯಗಳು, ಅಡುಗೆ ಎಣ್ಣೆ ಮತ್ತು ಇತರೆ ಸಂಸ್ಕರಿಸಿದ ಪದಾರ್ಥಗಳ ಗುಣಮಟ್ಟ/ಸೇವಿಸಲು ಯೋಗ್ಯತೆಯ ಕುರಿತು ಅಹಾರ ಸುರಕ್ಷತಾಧಿಕಾರಿಗಳು ನಿಗಾವಹಿಸಿದ್ದಾರೆ. |

| ಜಿಲ್ಲೆ | Metro, D mart, Reliance Retail, Big Bazaar, ಇತ್ಯಾದಿ ಸಂಸ್ಥೆಗಳಲ್ಲಿ ಮಾರಾಟವಾಗುವ ಧಾನ್ಯಗಳು, ಆಡುಗೆ ಎಣ್ಣೆ ಮತ್ತು ಇತರೆ ಸಂಸ್ಥರಿಸಿದ ಪದಾರ್ಥಗಳ ಗುಣಮಟ್ಟ/ಸೇವಿಸಲು ಯೋಗ್ಯತೆಯ ಕುರಿತು ತಪಾಸಣೆ ಮಾಡಿದ ಆಹಾರ ಉದ್ದಿಮೆಗಳ ಸಂಖ್ಯೆ | Metro, D mart, Reliance Retail, Big Bazaar, ಇತ್ಯಾದಿ ಸಂಸ್ಥೆಗಳಲ್ಲಿ ಮಾರಾಟವಾಗುವ ಧಾನ್ಯಗಳು, ಆಡುಗೆ ಎಣ್ಣೆ ಮತ್ತು ಇತರೆ ಸಂಸ್ಕರಿಸಿದ ಪದಾರ್ಥಗಳ ಗುಣಮಟ್ಟ/ಸೇವಿಸಲು ಯೋಗ್ಯತೆಯ ಕುರಿತು ಆಹಾರ ಮಾದರಿಗಳನ್ನು ಸಂಗ್ರಹಿಸಿದ ಸಂಖ್ಯೆ | ಕಳಪೆ ಗುಣಮಟ್ಟದ ಆಹಾರ ಪದಾಥ್ರಗಳ ಸಂಖ್ಯೆ | ಕ್ರಮ (ನ್ಯಾಯಾಲಯದಲ್ಲಿ ದಾಖಲಿಸಿದ ಪ್ರಕರಣಗಳ ಸಂಖ್ಯೆ) | ವಿಧಿಸಲಾದ ದಂಡದ ಮೊತ್ತ |
|---|---|---|---|---|---|
| ಬೆಂಗಳೂರು ನಗರ | 2215 | 718 | 2 | 2 | 0 |

ಅಕುಕ 45 ಎಸ್‌ಬಿವಿ 2022

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

# ಅನುಬಂಧ – 1

ಆಹಾರ ಸುರಕ್ಷತೆ & ಗುಣಮಟ್ಟ ಪ್ರಾಧಿಕಾರದ ಕೇಂದ್ರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಶ್ರೇಣಿ ವಿವರ

| ಕ್ರಮ ಸಂಖ್ಯೆ | ಅಧಿಕಾರಿಗಳ ಹುದ್ದೆಗಳ ವಿವರ | ಶ್ರೇಣಿ | ಒಟ್ಟು ಸಂಖ್ಯೆ |
|---|---|---|---|
| 1. | ಆಯುಕ್ತರು | ಎ | 1 |
| 2. | ವಿಶೇಷ ಆಯುಕ್ತರು (ಜಂಟಿ ಆಯುಕ್ತರು) | ಎ | 1 |
| 3. | ಉಪ ಆಯುಕ್ತರು (ಆಡಳಿತ) | ಎ | 1 |
| 4. | ಉಪ ಆಯುಕ್ತರು (ಸ್ಕ್ವಾಡ್) | ಎ | 1 |
| 5. | ಸಹಾಯಕ ಆಡಳಿತಾಧಿಕಾರಿ | ಬಿ | 1 |

ಆಹಾರ ಸುರಕ್ಷತೆ & ಗುಣಮಟ್ಟ ಪ್ರಾಧಿಕಾರದ ಅಧೀನ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಶ್ರೇಣಿಯ ವಿವರ

| ಕ್ರಮ ಸಂಖ್ಯೆ | ಅಧಿಕಾರಿಗಳ ಹುದ್ದೆಗಳ ವಿವರ | ಒಟ್ಟು ಸಂಖ್ಯೆ | ಶ್ರೇಣಿ | ಷರಾ |
|---|---|---|---|---|
| 1. | ಅಂಕಿತಾಧಿಕಾರಿಗಳು | 24 | ಎ | ಆ.ಕು.ಕ ಇಲಾಖೆಯ ವೈದ್ಯಾಧಿಕಾರಿಗಳು ನಿಯೋಜನೆ ಮೇಲೆ ಈ ಪ್ರಾಧಿಕಾರದಲ್ಲಿ ಅಂಕಿತಾಧಿಕಾರಿಗಳ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. |
| 2. | ಆಹಾರ ಸುರಕ್ಷತಾಧಿಕಾರಿಗಳು<br>– ತಾಲ್ಲೂಕು ಆರೋಗ್ಯಾಧಿಕಾರಿಗಳು | 52 | ಎ | ಆಹಾರ ಸುರಕ್ಷತಾಧಿಕಾರಿಗಳ ಹುದ್ದೆಗಳಲ್ಲಿ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆಯಿಂದ ನಿಯೋಜನೆ /ಹೆಚ್ಚುವರಿ ಪ್ರಭಾರ/ಅನ್ಯಪರ ಸೇವೆ ಮೇಲೆ ವಿವಿಧ ಶ್ರೇಣಿಯ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. |
| | – ಎಂಟಾಮಾಲಜಿಸ್ಟ್ /DHEO/Dy/DHEO | 08 | ಬಿ | |
| | – ಕಿರಿಯ/ ಹಿರಿಯ ಅರೋಗ್ಯ ಸಹಾಯಕರುಗಳು/ಆಹಾರ ಸುರಕ್ಷತಾಧಿಕಾರಿಗಳು, ಕಛೇರಿ ಅಧೀಕ್ಷಕರುಗಳು, ಪ್ರಥಮ ದರ್ಜೆ ಸಹಾಯಕರುಗಳು. | 66 | ಸಿ | |

- ಆಹಾರ ಸುರಕ್ಷತಾಧಿಕಾರಿಗಳ ಕೊರತೆ ಇರುವುದರಿಂದ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಆಹಾರ ಸುರಕ್ಷತಾಧಿಕಾರಿಗಳಿಗೆ ಹಾಗೂ ವಿವಿಧ ವೃಂದದ ಅಧಿಕಾರಿಗಳಿಗೆ ಒಂದಕ್ಕಿಂತ ಹೆಚ್ಚು ವೃತ್ತ/ತಾಲ್ಲೂಕುಗಳ ಪ್ರಭಾರವನ್ನು ಹೆಚ್ಚುವರಿಯಾಗಿ ವಹಿಸಲಾಗಿರುತ್ತದೆ.

ಕೆ. ಶ್ರೀನಿವಾಸ್

ವಿಶೇಷ ಆಯುಕ್ತರು,
ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ,
ಬೆಂಗಳೂರು.